# ವಿಪಶ್ಯನ ವಾರ್ತೆ
# VIPASSANA VARTE

ಕನ್ನಡ ಮಾಸಪತ್ರಿಕೆ, **10 ಮೇ 2023** ಬೆಂಗಳೂರು, ಸಂಪುಟ 9, ಸಂಚಿಕೆ 01, ಪುಟಗಳು-4. **ಸಂಪಾದಕರು** : ಜಿ.ಟಿ.ಗೋವಿಂದಪ್ಪ
Kannada monthly, **10 May 2023**, Bengaluru, Vol. 9, Issue No.01, Pages-4, KARKAN2015/68727 **Editor**: G.T. Govindappa.

ಚಂದಾ: ವಾರ್ಷಿಕ ರೂ. 30, ಆಜೀವ : ರೂ. 500.
ಪ್ರಕಾಶನ: ಕರ್ನಾಟಕ ವಿಪಶ್ಯನ ಪ್ರಚಾರ ಸಮಿತಿ ಟ್ರಸ್ಟ್.

Subscription :Annual Rs. 30; Life : Rs. 500/-
Published by: Karnataka Vipassana Prachara Samiti Trust.

## ಧಮ್ಮ ಪದಗಳು

ನ ವೇ ಕದರಿಯಾ ದೇವಲೋಕಂ ವಜಂತಿ
ಬಾಲಾ ಹವೇ ನಪ್ಪಸಂಸಂತಿ ದಾನಂ,
ಧೀರೋ ಚ ದಾನಂ ಅನುಮೋದಮಾನೋ
ತೇನೇವ ಸೋ ಹೋತಿ ಸುಖೀ ಪರತ್ಥ.

ಜಿಪುಣರು ನಿಜಕ್ಕೂ ದೇವಲೋಕಗಳಿಗೆ ಹೋಗುವವರಲ್ಲ. ಅಲ್ಲದೆ ಮೂರ್ಖರು ದಾನವಮಾಡುವುದನ್ನು ಹೊಗಳುವವರಲ್ಲ. ಆದರೆ ಜಾಣರು ದಾನ ಕೊಡುವುದರಲ್ಲಿ ಸಂತೋಷಿಸುವರು. ಅದರಿಂದಾಗಿಯೇ ಅವರು ಮುಂದೆ ಸುಖ ಪಡೆಯುವರು.

ಧಮ್ಮಪದ –177, ಲೋಕ ವರ್ಗ

## ಎಸ್.ಎನ್. ಗೋಯಂಕಜಿಯವರೊಡನೆ ಪ್ರಶ್ನೋತ್ತರಗಳು

ವಾರ್ಷಿಕ ಸಭೆ, ಧಮ್ಮ ಗಿರಿ, ಭಾರತ, ಜನವರಿ 10, 1998

(‘ಫಾರ್ ದ ಬೆನಿಫಿಟ್ ಆಫ್ ಮೆನಿ’ ಪುಸ್ತಕದಿಂದ ಅನುವಾದಿಸಲಾಗಿದೆ.)

**ಪ್ರಶ್ನೆ :** ಗುರೂಜಿ ಧ್ಯಾನಾರ್ಥಿಗಳಲ್ಲಿ ನೀವು ಟ್ರಸ್ಟಿಗಳನ್ನು, ಸಹಾಯಕ ಆಚಾರ್ಯರುಗಳನ್ನು ಮತ್ತು ಆಚಾರ್ಯರುಗಳನ್ನು ಹೇಗೆ ಆಯ್ಕೆ ಮಾಡುತ್ತೀರಿ?

**ಗೋಯಂಕಜಿ :** ಅವರನ್ನು ನಾನು ಹೇಗೆ ಆಯ್ಕೆ ಮಾಡುವುದಿಲ್ಲ ಎಂದು ಕೇಳಿ. ಸಹಾಯಕ ಆಚಾರ್ಯರಾಗಿ, ಆಚಾರ್ಯರಾಗಿ ಅಥವಾ ಮತ್ಯಾವುದೇ ಸ್ಥಾನಕ್ಕೆ ಯಾರನ್ನಾದರು ಆಯ್ಕೆ ಮಾಡದಿರುವುದಕ್ಕೆ ಕಾರಣಗಳೇನು?

ನೋಡಿ, ಇದು ಹೆಚ್ಚು ಕಡಿಮೆ ಹೊಸ ಸಂಪ್ರದಾಯ–ವಿಪಶ್ಯನದ ಗೃಹಸ್ಥ ಆಚಾರ್ಯರುಗಳ ಹೊಸ ಸಂಪ್ರದಾಯವನ್ನು ಸ್ಥಾಪಿಸುವ ಜವಾಬ್ದಾರಿ ನನ್ನ ಮೇಲೆ ಬಿದ್ದಿದೆ.

ಪೂಜ್ಯರಾದ ಲೇಡಿ ಸಯಾದೋ ಅವರಿಗೆ ನಾವು ಬಹಳ ಕೃತಜ್ಞರಾಗಿದ್ದೇವೆ. ನೂರು ವರ್ಷಗಳ ಹಿಂದೆ ಅವರು ಒಂದು ಅಡ್ಡಿಯನ್ನು ನಿವಾರಿಸಿದರು. ವಿಪಶ್ಯನವು ಭಿಕ್ಖುಗಳಿಗೆ ಮಾತ್ರ ಸೀಮಿತವಾಗಿತ್ತು. “ಭಿಕ್ಖುಗಳಿಗೆ ಮಾತ್ರ ಏಕೆ? ಗೃಹಸ್ಥರು ಸಹ ವಿಪಶ್ಯನವನ್ನು ಕಲಿಯಬೇಕು” ಎಂದು ಅವರು ಹೇಳಿದರು ಮತ್ತು ಗೃಹಸ್ಥರಿಗೆ ವಿಪಶ್ಯನವನ್ನು ಹೇಳಿಕೊಡಲು ಪ್ರಾರಂಭಿಸಿದರು. ನಂತರ ಅವರು ಗೃಹಸ್ಥರಿಗೆ ಮತ್ತೊಂದು ಬಾಗಿಲನ್ನು ತೆರೆದರು–ಗೃಹಸ್ಥ ವಿಪಶ್ಯನ ಬೋಧಕರೂ ಇರಬೇಕು. ಸಯಾ ಥೆಟ್ ಅವರನ್ನು ವಿಪಶ್ಯನದ ಪ್ರಥಮ ಗೃಹಸ್ಥ ಆಚಾರ್ಯರನ್ನಾಗಿ ನೇಮಕ ಮಾಡಿದರು. ಅದು ಹೆಬ್ಬಾಗಿಲನ್ನು ತೆರೆದಂತಾಯಿತು. ಏಕೆಂದರೆ ಅವರು ಭವಿಷ್ಯವನ್ನು ಬಹಳ ಚೆನ್ನಾಗಿ ಗ್ರಹಿಸಿದರು. ಈಗ 2,500 ವರ್ಷಗಳು ಪೂರ್ಣಗೊಳ್ಳುವುದರಲ್ಲಿದೆ. ಮುಂದಿನ ‘ಬುದ್ಧ ಸಾಸನ’ವು (ಬುದ್ಧರ ಬೋಧನೆಗಳು ಲಭ್ಯವಿರುವ ಅವಧಿ) ಪ್ರಾರಂಭವಾಗುತ್ತದೆ.

ಬುದ್ಧರ ಅನುಯಾಯಿಗಳಿರುವ ಅಥವಾ ತಮ್ಮನ್ನು ತಾವು ಬೌದ್ಧರು ಎಂದು ಕರೆದುಕೊಳ್ಳುವ ದೇಶಗಳಲ್ಲಿ ಒಬ್ಬ ಭಿಕ್ಖುವು ಧರ್ಮ ಪೀಠದ ಮೇಲೆ ಕುಳಿತರೆ ಜನರು ಬಹಳ ಸಂತೋಷಪಡುತ್ತಾರೆ. ಅವರು ಹೇಳುವ ಪ್ರತಿಯೊಂದನ್ನೂ ಜನರು ಸ್ವೀಕರಿಸುತ್ತಾರೆ ಮತ್ತು ಅವರನ್ನು ಅನುಸರಿಸುತ್ತಾರೆ. ಆದರೆ ಇತರೆ ದೇಶಗಳಲ್ಲಿ ಒಬ್ಬ ಭಿಕ್ಖುವು “ನನ್ನ ಹತ್ತಿರ ಬನ್ನಿ, ನಾನು ನಿಮಗೆ ಧರ್ಮವನ್ನು ಬೋಧಿಸುತ್ತೇನೆ” ಎಂದು ಹೇಳಿದರೆ ಯಾರೂ ಬರುವುದಿಲ್ಲ. ಎಲ್ಲರೂ ದೂರ ಓಡುತ್ತಾರೆ. “ಓ ಇವರು ನಮ್ಮನ್ನು ಅವರ ಧರ್ಮಕ್ಕೆ ಮತಾಂತರಗೊಳಿಸಲು ಬಂದಿದ್ದಾರೆ” ಎಂದು ಜನರು ಯೋಚಿಸುತ್ತಾರೆ. ಆದರೆ ಒಬ್ಬ ಸಾಮಾನ್ಯ ಮನುಷ್ಯ ಬೋಧಿಸಿದರೆ ಈ ಸಮಸ್ಯೆ ಇರುವುದಿಲ್ಲ. ಈ ವ್ಯಕ್ತಿಯು ಬಹಳ ಎಚ್ಚರಿಕೆಯಿಂದ ಜನರನ್ನು ಮತಾಂತರಗೊಳಿಸುವುದರಲ್ಲಿ ಖಂಡಿತವಾಗಿ ನಮಗೆ ಆಸಕ್ತಿಯಿಲ್ಲ ಎಂಬುದನ್ನು ಸ್ಪಷ್ಟಪಡಿಸಬೇಕು. ಗೃಹಸ್ಥ ಆಚಾರ್ಯರ ಪರಂಪರೆ ಏಕೆ ಪ್ರಾರಂಭವಾಯಿತು ಎಂಬುದಕ್ಕೆ ಇದು ಒಂದು ಕಾರಣ. ಏಕೆಂದರೆ ಲೇಡಿ ಸಯಾದೋ ಅವರು ಈ ಅವಶ್ಯಕತೆಯನ್ನು ಮೊದಲೇ ಊಹಿಸಿದ್ದರು.

ಸಯಾಜಿ ಉ ಬಾ ಖಿನ್ ಅವರ ಕಾಲದಲ್ಲಿ ಕೆಲವೇ ಕೆಲವು ವಿದ್ಯಾರ್ಥಿಗಳಿರುತ್ತಿದ್ದರು. ಈಗ ವಿದ್ಯಾರ್ಥಿಗಳ ಸಂಖ್ಯೆ ಬೆಳೆಯುತ್ತಿದೆ. ಆದ್ದರಿಂದ ಈಗ ಪ್ರಾರಂಭವಾಗುತ್ತಿರುವ ಸಂಪ್ರದಾಯವು ಸರಿಯಾದ ರೀತಿಯಲ್ಲಿ ಆರಂಭವಾಗಬೇಕು. ಈಗ ಆಗುವ ಯಾವುದೇ ತಪ್ಪು ತಲೆಮಾರುಗಳು ಕಳೆದಂತೆ ತುಂಬಾ ಕೆಡುಕಾಗುತ್ತದೆ. ನನ್ನ ವಿವೇಕವು ಅನುಮತಿಸುವ ಮಟ್ಟಿಗೆ, ನನ್ನ ಬುದ್ಧಿಯು ಅನುಮತಿಸುವ ಮಟ್ಟಿಗೆ, ಪ್ರಾರಂಭವು ಬಹಳ ಪರಿಶುದ್ಧವಾದ ರೀತಿಯಲ್ಲಿ ಆಗುವಂತೆ ನಾನು ನೋಡಿಕೊಳ್ಳಬೇಕು.

ಪರಿಶುದ್ಧವಾದ ರೀತಿ ಯಾವುದು? ಧಮ್ಮವು ಬಹಳ ಪರಿಶುದ್ಧವಾಗಿದೆ. ಯಾವುದೇ ವ್ಯಕ್ತಿಯು ಸಹಾಯಕ ಆಚಾರ್ಯರಾಗುವ ಬಯಕೆಯನ್ನು ವ್ಯಕ್ತಪಡಿಸಿದ್ದು ನನ್ನ ಗಮನಕ್ಕೆ ಬಂದ ಕ್ಷಣ, ಆ ವ್ಯಕ್ತಿಯ ಬಗ್ಗೆ ನನಗೆ ಬಹಳ ಅನುಕಂಪವಾಗುತ್ತದೆ. ಆದರೆ ಈ ವ್ಯಕ್ತಿಯು ಆಚಾರ್ಯರಾಗಲು ಸೂಕ್ತವಲ್ಲ ಎಂದು ನಾನು ಗೆರೆ ಎಳೆಯಲೇ ಬೇಕು. “ನಾನು ಟ್ರಸ್ಟಿ ಆದರೆ ಬಹಳ ಚೆನ್ನಾಗಿರುತ್ತದೆ; ನಾನು ಇದನ್ನು ಮಾಡಬಹುದು, ನಾನು ಅದನ್ನು ಮಾಡಬಹುದು” ಎಂದು ಯಾರಾದರು ಅಪೇಕ್ಷಿಸಿದರೆ ಅವರನ್ನು ಕಪ್ಪು ಪಟ್ಟಿಗೆ ಸೇರಿಸಲಾಗುತ್ತದೆ. ಒಂದು ವಿಪಶ್ಯನ ಸಂಸ್ಥೆಯ ಅಧ್ಯಕ್ಷನಾಗುತ್ತೇನೆ ಅಥವಾ ಕಾರ್ಯದರ್ಶಿಯಾಗುತ್ತೇನೆ ಎಂದು ಯಾರಾದರೂ ನನಗೆ ಸೂಚನೆ ಕೊಟ್ಟರೆ ಅವರನ್ನು ಕಪ್ಪು ಪಟ್ಟಿಗೆ ಸೇರಿಸಲಾಗುತ್ತದೆ.

ಈ ವ್ಯಕ್ತಿಯು ನನಗೆ ಎಷ್ಟೇ ಆಪ್ತನಾಗಿರಲಿ ನಾನು ಅದನ್ನು ಪರಿಗಣಿಸುವುದಿಲ್ಲ. ಏಕೆಂದರೆ ಈ ವ್ಯಕ್ತಿಯು ಧರ್ಮದಲ್ಲಿ ಮಾಗಿಲ್ಲ. ಅವನು ಅಥವಾ ಅವಳು ಸ್ಥಾನ, ಅಧಿಕಾರ, ಅಂತಸ್ತನ್ನು ಬಯಸುತ್ತಾರೆ. ಈ ವ್ಯಕ್ತಿಗೆ ಸೇವೆಗಿಂತ ಇದೇ ಮುಖ್ಯ. ಆದರೆ ಯಾರಾದರು ನನ್ನ ಬಳಿ, ಬಂದು, “ಯಾವುದೇ ರೀತಿಯ ಸೇವೆಯನ್ನಾದರು ನಾನು ಮಾಡುತ್ತೇನೆ. ನೋಡಿ ನನ್ನಲ್ಲಿ ಬಹಳ ಸಮಯವಿದೆ. ಯಾವ ಸೇವೆ ಮಾಡಬಹುದೆಂದು ದಯವಿಟ್ಟು ತಿಳಿಸಿ” ಎಂದು ಹೇಳಿದರೆ ನಾನು ಒಳ್ಳೆಯ ಮಾರ್ಕ್ಸ್ ಕೊಡುತ್ತೇನೆ. ಅವನು ಅಥವಾ ಅವಳು ಯಾವುದೇ ಸ್ಥಾನ, ಅಧಿಕಾರ, ಅಂತಸ್ತು ಮುಂತಾದವುಗಳನ್ನು ನಿರೀಕ್ಷಿಸದೆ ನಿಜವಾಗಿಯೂ ನಿಸ್ವಾರ್ಥ ಸೇವೆ ಮಾಡುವುದನ್ನು ಕಂಡಾಗ ನಿಧಾನವಾಗಿ ಈ ವ್ಯಕ್ತಿಯನ್ನು ಆಯ್ಕೆ ಮಾಡಲಾಗುತ್ತದೆ.

ಯಾರನ್ನಾದರು ಆಯ್ಕೆ ಮಾಡುತ್ತೇನೆ. ನಂತರ ಅವರು ಹೆಚ್ಚು ಹೆಚ್ಚು ಅಹಂ ಬೆಳೆಸಿಕೊಳ್ಳುತ್ತಾರೆ. ಜನರೊಡನೆ ವ್ಯವಹರಿಸುವಾಗ ಅಹಂಕಾರದಿಂದ ವರ್ತಿಸುತ್ತಾರೆ; ದ್ವೇಷ ಮತ್ತು ಹಗೆತನ ಉತ್ಪತ್ತಿ ಮಾಡಿಕೊಂಡು ತಮಗೆ ತಾವೇ ಹಾನಿ ಮಾಡಿಕೊಳ್ಳುತ್ತಾರೆ. ಈ ವ್ಯಕ್ತಿಯ ಬಗ್ಗೆ ನನಗೆ ಬಹಳ ಅನುಕಂಪವಾಗುತ್ತದೆ. “ನೋಡು, ಈ ವ್ಯಕ್ತಿಯು ಮಲಿನತೆಗಳನ್ನು ಉತ್ಪತ್ತಿ ಮಾಡಿಕೊಳ್ಳುವುದಕ್ಕೆ ನಾನೇ ಜವಾಬ್ದಾರನಾದೆ. ಈ ಉನ್ನತ ಸ್ಥಾನದಲ್ಲಿ ಅವನು ಅಥವಾ ಅವಳನ್ನು ಕೂರಿಸದಿದ್ದರೆ, ಈ ವ್ಯಕ್ತಿಯು ಈ ರೀತಿಯ ಅಹಂನ್ನು ಉತ್ಪತ್ತಿ ಮಾಡಿಕೊಳ್ಳುತ್ತಿರಲಿಲ್ಲ. ಅಹಂಕಾರದ ಮಾತುಗಳನ್ನು ಆಡುತ್ತಿರಲಿಲ್ಲ ಮತ್ತು ಜನರಿಗೆ ಹಾನಿ ಮಾಡುತ್ತಿರಲಿಲ್ಲ”. ಆದ್ದರಿಂದ ಸ್ವಲ್ಪ ಕಾಯುವುದು ಉತ್ತಮ.

ಆ ವ್ಯಕ್ತಿಯಿಂದ ಆಚಾರ್ಯರ ಸ್ಥಾನವನ್ನು ಹಿಂಪಡೆಯಲು ಆಗುವುದಿಲ್ಲ. ಆದರೆ ಅವನು ಅಥವಾ ಅವಳನ್ನು ಆ ಕೆಲಸದಿಂದ ತೆಗೆದು ಮತ್ತೊಂದು

ಕೆಲಸವನ್ನು ಕೊಡಬೇಕು. "ನೋಡು ಇದು ನಿನ್ನ ತಪ್ಪು ; ನೀನು ಇದರಿಂದ ಹೊರಬಂದಾಗ ಬಹಳ ಮುಖ್ಯವಾದ ಕೆಲಸವನ್ನು ಪಡೆಯುತ್ತೀರಿ. ಯಾವ ಅರ್ಥದಲ್ಲಿ ಬಹಳ ಮುಖ್ಯ ಎಂದರೆ, ಹೆಚ್ಚು ಜನರಿಗೆ ಸೇವೆ ಮಾಡಿ ಅವರು ಧರ್ಮದಲ್ಲಿ ಬೆಳೆಯಲು ಸಹಾಯ ಮಾಡಲು ಹೆಚ್ಚಿನ ಅವಕಾಶಗಳನ್ನು ಪಡೆಯುತ್ತೀರಿ". ಗೃಹಸ್ಥ ಆಚಾರ್ಯರುಗಳ ಸಂಪ್ರದಾಯವನ್ನು ಪ್ರಾರಂಭಿಸುವ ಧಮ್ಮ ಆಚಾರ್ಯರ ದೊಡ್ಡ ಜವಾಬ್ದಾರಿಯಾಗುತ್ತದೆ.

ಜೊತೆಗೆ, ಜವಾಬ್ದಾರಿಯುತ ಕೆಲಸವನ್ನು ಕೊಟ್ಟಿರುವ ಸಹಾಯಕ ಆಚಾರ್ಯರುಗಳು ಅಥವಾ ಟ್ರಸ್ಟಿಗಳು ಉದ್ದೇಶಪೂರ್ವಕವಾಗಿಯೋ ಅಥವಾ ಉದ್ದೇಶವಿಲ್ಲದೆಯೋ ತಮ್ಮದೇ ಗುಂಪನ್ನು ಸೃಷ್ಟಿಸಿಕೊಳ್ಳುತ್ತಾರೆ. "ಇವನು ನನ್ನ ಗುಂಪಿನ ಸದಸ್ಯ, ನನ್ನ ಗುಂಪಿನ ಸದಸ್ಯನನ್ನು ಬೆಂಬಲಿಸುವುದು ಉತ್ತಮ. ನನ್ನ ಗುಂಪಿನ ಸದಸ್ಯನಲ್ಲದವನನ್ನು ಕೆಳಗಿಳಿಸಬೇಕು" ಎಂದು ಆಲೋಚಿಸುತ್ತಾರೆ. ಈ ಜನಗಳಲ್ಲಿ ಧರ್ಮವೇ ಇಲ್ಲದಿರುವುದನ್ನು ನಾನು ಮನಗಾಣುತ್ತೇನೆ. ಇಂತಹ ಗುಂಪುಗಾರಿಕೆ ರಾಜಕೀಯ ಪಕ್ಷದಲ್ಲಿ ಎಲ್ಲಾ ರೀತಿಯ ಸಾಮಾಜಿಕ ಸಂಘಟನೆಗಳಲ್ಲಿ ಸರಿಯಿರಬಹುದು. ಆದರೆ ಪರಿಶುದ್ಧ ಧರ್ಮ ಸಂಘಟನೆಯಲ್ಲಿ ಅಲ್ಲ. ಇಂತಹುದು ಪ್ರಾರಂಭವಾದ ತಕ್ಷಣವೇ ಅದನ್ನು ತಡೆಯುವುದು ನನ್ನ ಕರ್ತವ್ಯ. ಈ ಗುಂಪುಗಳನ್ನು ನಾಶ ಮಾಡಿ ಮತ್ತು ಇಂತಹ ಪರಿಸ್ಥಿತಿಯನ್ನು ಸೃಷ್ಟಿಸಲು ಜನರಿಗೆ ಅವಕಾಶ ಕೊಡಬೇಡಿ.

ಇದು ನನಗೆ ಮಾತ್ರವಲ್ಲ, ಭವಿಷ್ಯದ ಪ್ರಧಾನ ಆಚಾರ್ಯರುಗಳಿಗೂ ಕೂಡ ಅನ್ವಯಿಸುತ್ತದೆ. ಇದರಿಂದ ಅವರಿಗೆ ಆದರ್ಶ ಧಮ್ಮ ಕೇಂದ್ರಗಳನ್ನು ಮತ್ತು ಧರ್ಮ ನಿರ್ವಹಣೆ ಮಾಡುವುದಕ್ಕೆ ಮಾರ್ಗದರ್ಶನ ದೊರೆಯುತ್ತದೆ. ಈ ಅಂಶಗಳನ್ನು ನಾವು ಗಮನದಲ್ಲಿರಿಸಿಕೊಳ್ಳಬೇಕು. ಈ ಕಾರಣಕ್ಕಾಗಿ, ನಾನು ತಪ್ಪು ಮಾಡಿದ್ದರೂ ಅದನ್ನು ಸರಿಪಡಿಸಲು ಪ್ರಯತ್ನಿಸುತ್ತೇನೆ.

ನಾನು ಹೇಳಿದಂತೆ, ಒಬ್ಬ ಸಹಾಯಕ ಆಚಾರ್ಯರನ್ನು ತೆಗೆದು ಹಾಕುವುದು ಕಷ್ಟ. ಏಕೆಂದರೆ ಧರ್ಮ ಪೀಠದ ಮೇಲೆ ಕುಳಿತು ಧರ್ಮವನ್ನು ಬೋಧಿಸುವ ವ್ಯಕ್ತಿಯು ತನ್ನ ವಿದ್ಯಾರ್ಥಿಗಳ ಜೊತೆ ಒಂದು ಬಾಂಧವ್ಯ ಬೆಳೆಸಿಕೊಂಡಿರುತ್ತಾರೆ. ನಾನು ಈ ಬಾಂಧವ್ಯವನ್ನು ಮುರಿಯಲು ಬಯಸುವುದಿಲ್ಲ. ಆದ್ದರಿಂದ, ಅವರನ್ನು ತೆಗೆದುಹಾಕುವುದು ಅನಿವಾರ್ಯ ಎನ್ನುವವರೆಗೆ ಅದು ಮುಂದುವರಿಯುತ್ತದೆ. ಅಂತಹ ಸಂದರ್ಭದಲ್ಲಿ ನಾನು ಈ ವ್ಯಕ್ತಿಗೆ "ಇನ್ನು ಮುಂದೆ ನೀವು ಸಹಾಯಕ ಆಚಾರ್ಯರಲ್ಲ" ಎಂದು ಹೇಳಲೇಬೇಕು. ಇದು ಬಹಳ ಅಪರೂಪ. ಇದು ಆಗಿದೆ, ಆದರೆ ಬಹಳ ವಿರಳ.

ಟ್ರಸ್ಟಿಗಳು, ಮ್ಯಾನೇಜ್‌ಮೆಂಟ್ ಮುಂತಾದ ವಿಷಯಗಳಿಗೆ ಬಂದಾಗ, ಖಂಡಿತವಾಗಿ ನಾನು ಅವರನ್ನು ಬದಲಾಯಿಸುತ್ತಿರುತ್ತೇನೆ. ಟ್ರಸ್ಟಿನಲ್ಲಿ ಪ್ರತಿ ವರ್ಷವೂ ಅವರು ರಾಜೀನಾಮೆ ಕೊಡಬೇಕು. ನಾನು ಮತ್ತೊಬ್ಬರನ್ನು ನೇಮಕ ಮಾಡುತ್ತೇನೆ. ಅವರಲ್ಲಿ ಕೆಲವರನ್ನು ಮರುನೇಮಕ ಮಾಡುತ್ತೇನೆ. ಏಕೆ? ಅವರಲ್ಲಿ ಏನಾದರು ತಪ್ಪಿದೆ ಎಂಬ ಕಾರಣಕ್ಕಲ್ಲ. ಆದರೆ ತೊಂದರೆ ಏನೆಂದರೆ, ಒಂದೇ ಸ್ಥಾನದಲ್ಲಿ ಯಾರಾದರೂ ದೀರ್ಘಕಾಲದವರೆಗೆ ಇದ್ದರೆ ಗೊತ್ತಿಲ್ಲದೆಯೋ, ಗೊತ್ತಿದ್ದೋ ಬಂಧನ ಬೆಳೆಸಿಕೊಳ್ಳಬಹುದು. "ನಾನು ಪ್ರಧಾನ ಕಾರ್ಯದರ್ಶಿ. ಈ ಕೆಲಸವನ್ನು ಬೇರೆ ಯಾರೂ ಮಾಡಲು ಸಾಧ್ಯವಿಲ್ಲ. ನಾನು ಈ ಕೆಲಸದಲ್ಲಿ ಪರಿಣಿತನಾಗಿದ್ದೇನೆ ; ಆದ್ದರಿಂದ ನಾನು ಮುಂದುವರಿಯಬೇಕು. ನಾನು ಮುಂದುವರಿಯದಿದ್ದರೆ ಎಲ್ಲವೂ ಕುಸಿದು ಬೀಳುತ್ತದೆ" ಎಂಬ ಬಂಧನ ಏರ್ಪಡಬಹುದು. ಏನಾಗಿದೆ? ಅವನು ಏನನ್ನು ಮಾಡುತ್ತಿದ್ದಾನೆ? ತಾನು ಅನಿವಾರ್ಯ ಎಂದು ಭಾವಿಸಿಕೊಳ್ಳಲು ಪ್ರಾರಂಭಿಸಿದ್ದಾನೆ. ಇದು ಧರ್ಮವಲ್ಲ. ಆದ್ದರಿಂದ ಪ್ರತಿ ವರ್ಷವೂ ಬದಲಾಯಿಸಿ ಮತ್ತೊಂದು ಕಾರಣವೆಂದರೆ, ಹೆಚ್ಚು ಜನರು ಪಾರಮೀಗಳನ್ನು ಗಳಿಸಿಕೊಳ್ಳಲು ಅವಕಾಶ ಪಡೆಯಬೇಕು, ಹೆಚ್ಚು ಜನರು, ಜನಸೇವೆ ಮಾಡಲು ಬರಬೇಕು, ವಿಪಶ್ಯನ ವಿದ್ಯಾರ್ಥಿಗಳ ಸೇವೆ ಮಾಡಬೇಕು.

ಒಬ್ಬ ಟ್ರಸ್ಟಿ, ಅಧ್ಯಕ್ಷ ಅಥವಾ ಕಾರ್ಯದರ್ಶಿಯನ್ನು ರಾಜೀನಾಮೆ ಕೊಡಿ ಎಂದು ಹೇಳಿದ ಕ್ಷಣದಿಂದ ಅವರ ಪರೀಕ್ಷೆ ಆರಂಭವಾಗುತ್ತದೆ. "ಈಗ ಅವರು ಹೇಗೆ ಸೇವೆ ಮಾಡುತ್ತಿದ್ದಾರೆ? ಎಂದು ನನ್ನನ್ನು ನಾನೇ ಪ್ರಶ್ನಿಸಿಕೊಳ್ಳುತ್ತೇನೆ. ಈ ವ್ಯಕ್ತಿಯು ಅಧ್ಯಕ್ಷನಾಗಿದ್ದಾಗ ಬಹಳ ಉತ್ಸಾಹದಿಂದ ಶ್ರಮಪಟ್ಟು ಕೆಲಸ ಮಾಡುತ್ತಿದ್ದ. ಈಗ ಅವನು ಅಧ್ಯಕ್ಷನಲ್ಲ ಅಥವಾ ಪ್ರಧಾನ ಕಾರ್ಯದರ್ಶಿಯಲ್ಲ, ಏನಾಗುತ್ತದೆ?" ಈ ವ್ಯಕ್ತಿಯು ಈಗ ಧರ್ಮದ ಕೆಲಸದಲ್ಲಿ ಎಲ್ಲಾ ಆಸಕ್ತಿಯನ್ನೂ ಕಳೆದುಕೊಂಡಿದ್ದಾನೆ ಎಂದರೆ ಅವನು ತನ್ನ ಅಹಂನ್ನು ಹೆಚ್ಚಿಸಿಕೊಳ್ಳಲು ಸ್ಥಾನದಲ್ಲಿ ಆಸಕ್ತಿ ಹೊಂದಿದ್ದ, ಸೇವೆ ಮಾಡುವುದರಲ್ಲಲ್ಲ. ಆದರೆ ಈ ವ್ಯಕ್ತಿಯಲ್ಲಿ ನನಗೆ ಕರುಣೆಯಿದೆ ಮತ್ತು ಈ ವ್ಯಕ್ತಿಗೆ ವಿವರಣೆ ಕೊಡಲು ಪ್ರಯತ್ನಿಸುತ್ತೇನೆ, ಅವನನ್ನು ಮರಳಿ ಧರ್ಮಕ್ಕೆ ತರಲು ಪ್ರಯತ್ನಿಸುತ್ತೇನೆ. ಇದು ಪ್ರಧಾನ ಆಚಾರ್ಯರ ಕೆಲಸ. ಅವರ ಧರ್ಮ ಪುತ್ರರು ಮತ್ತು ಧರ್ಮ ಪುತ್ರಿಯರು ಧರ್ಮದಲ್ಲಿ ಬೆಳೆಯುವಂತೆ ನೋಡಿಕೊಳ್ಳುವುದು. ಇದು ಬಹಳ ಮುಖ್ಯ. ಇವೆಲ್ಲಾ ನಡೆಯುತ್ತವೆ ಮತ್ತು ವ್ಯಕ್ತಿಯು ಗಮನಿಸುತ್ತಾನೆ.

ಗಮನದಲ್ಲಿಟ್ಟುಕೊಳ್ಳಬೇಕಾದ ಮತ್ತೊಂದು ಅಂಶವೆಂದರೆ, ಇದು ಈಗ ಗೃಹಸ್ಥ ಆಚಾರ್ಯರುಗಳ ಸಂಪ್ರದಾಯ. ಬುದ್ಧರ ಕಾಲದಲ್ಲಿ ಗೃಹಸ್ಥ ಆಚಾರ್ಯರುಗಳೂ ಇದ್ದರು. ಆದರೆ ನಂತರದಲ್ಲಿ ಭಿಕ್ಖುಗಳು ಮಾತ್ರ ಬೋಧಿಸುತ್ತಿದ್ದರು. ಭಿಕ್ಖುವು 'ವಿನಯ'ದ (ಭಿಕ್ಖುಗಳಿಗಿರುವ ನಿಯಮಗಳು) ಪ್ರಕಾರ ಬದುಕಿದರೆ ಏನೂ ತಪ್ಪಿಲ್ಲ. ಅವರು ಸಂಪತ್ತನ್ನು ಶೇಖರಿಸುವುದಿಲ್ಲ. ಅವರ ಅವಶ್ಯಕತೆಗಳನ್ನು ಮಾತ್ರ ನೋಡಿಕೊಳ್ಳಲಾಗುತ್ತದೆ. ಭಿಕ್ಖು ಆಚಾರ್ಯರು 'ವಿನಿಯ'ದ ಪ್ರಕಾರ ತಮ್ಮನ್ನು ನಿಯಂತ್ರಿಸಿಕೊಳ್ಳದಿದ್ದರೆ, ಅವರು ನಿಯಮಗಳನ್ನು ಪಾಲಿಸುವುದಿಲ್ಲ. ಅವರು ಹಣವನ್ನು ಅಥವಾ ಮತ್ತೇನನ್ನೋ ಸಂಗ್ರಹಿಸಿಟ್ಟುಕೊಳ್ಳುತ್ತಾರೆ. ಅವರು ಆ ಸ್ಥಾನಕ್ಕೆ ಸೂಕ್ತವಲ್ಲ ಎಂಬುದನ್ನು ನಾನು ಮನಗಾಣುತ್ತೇನೆ. ಸರಿ ಇದು ಭಿಕ್ಖು ಆಚಾರ್ಯರುಗಳಿಗೆ ಸಂಬಂಧಿಸಿದ ಸಮಸ್ಯೆ. ಆದರೆ ನನ್ನ ಕಾಳಜಿ ಗೃಹಸ್ಥ ಆಚಾರ್ಯರುಗಳ ಬಗ್ಗೆ. ನಾನು ಗೃಹಸ್ಥ ಆಚಾರ್ಯರುಗಳಿಗೆ ಬಹಳ ಆರೋಗ್ಯಕರವಾದ, ಪರಿಪೂರ್ಣವಾದ ಸಂಪ್ರದಾಯವನ್ನು ಪ್ರಾರಂಭಿಸಬೇಕು ; ನಾನು ಬಹಳ ಎಚ್ಚರದಿಂದಿರಬೇಕು.

ಯಾರನ್ನಾದರೂ ಸಹಾಯಕ ಅಥವಾ ಹಿರಿಯ ಸಹಾಯಕ ಆಚಾರ್ಯರಾಗಿ ಅಥವಾ ಆಚಾರ್ಯರಾಗಿ ನೇಮಿಸಲಾಯಿತು ಎಂದಿಟ್ಟುಕೊಳ್ಳಿ, ಅವರಿಗೆ ಜೀವನೋಪಾಯಕ್ಕೆ ಏನೂ ಇಲ್ಲ. ಗೃಹಸ್ಥನಾಗಿ ಈ ಆಚಾರ್ಯರಿಗೆ ಕೌಟುಂಬಿಕ ಜವಾಬ್ದಾರಿಗಳಿರುತ್ತವೆ ಆದರೆ ಜೀವನಕ್ಕೆ ಆದಾಯವಿಲ್ಲ. ಆಗ ಬಹುಶಃ ಈ ಕಾರಣಕ್ಕೆ, ಅವನು ಅಥವಾ ಅವಳು ಕೈಚಾಚಲು ಪ್ರಾರಂಭಿಸಬಹುದು. "ನೋಡಿ, ನನ್ನ ಮಗ ಅಥವಾ ಮಗಳಿಗೆ ಕಾಯಿಲೆ ಆಗಿದೆ. ನನ್ನ ಮಗ ಅಥವಾ ಮಗಳ ಮದುವೆ ಮಾಡಬೇಕಾಗಿದೆ, ನನಗೆ ಕುಟುಂಬದಲ್ಲಿ ಸಮಸ್ಯೆಯಿದೆ, ಸ್ವಲ್ಪ ಸಹಾಯ ಮಾಡಿ ಎಂದು ಕೇಳಬಹುದು". ಅನುಕಂಪದಿಂದ ಅಥವಾ ಆಚಾರ್ಯರ ಮೇಲಿನ ಗೌರವದಿಂದ ದಾನ ಕೊಡಲು ಆರಂಭಿಸಬಹುದು. ಇದು ಯಾವಾಗಲಾದರೂ ನಡೆದರೆ ಇಡೀ ಸಂಪ್ರದಾಯವೇ ಕೆಟ್ಟುಹೋಗುತ್ತದೆ.

ಆದ್ದರಿಂದ, ನಾನು ನೇಮಕ ಮಾಡುವ ವ್ಯಕ್ತಿಗೆ ಕನಿಷ್ಠ ಪಕ್ಷ ತನ್ನ ಕುಟುಂಬ ನಿರ್ವಹಿಸಲು ಸಾಕಾಗುವಷ್ಟು ಆದಾಯವಿದೆಯೇ ಎಂಬುದನ್ನು ನಾನು ಪರೀಕ್ಷಿಸಬೇಕು. ಇದ್ದರೆ ಅದು ಪರಿಪೂರ್ಣವಾಗಿ ಸರಿ. ಈ ವ್ಯಕ್ತಿಗೆ ಜೀವನಕ್ಕೆ ಯಾವುದೇ ಆದಾಯ ಮೂಲವಿಲ್ಲದಿದ್ದರೆ, ಅವರು ಎಷ್ಟೇ ಸಮರ್ಥರಾಗಿದ್ದರು ಅವರನ್ನು ಆಚಾರ್ಯರಾಗಿ ನೇಮಿಸುವುದಿಲ್ಲ. ನಾನು ಬಡವರ ಬಗ್ಗೆ ಪೂರ್ವಾಗ್ರಹ ಹೊಂದಿದ್ದೇನೆ ಎಂಬಂತೆ ಕಾಣಬಹುದು. ಆದರೆ ವಾಸ್ತವವಾಗಿ, ತನ್ನ ಕುಟುಂಬವನ್ನು ಪೋಷಿಸಲು ಸಾಧ್ಯವಿಲ್ಲದ ವ್ಯಕ್ತಿಯನ್ನು ಆಚಾರ್ಯರಾಗಿ ನೇಮಿಸಿದರೆ, ಅದು ಈ ಪರಂಪರೆಗೆ ಬಹಳ ಹಾನಿಕಾರಕವಾಗುತ್ತದೆ.

ಈಗ ನಾವು ಈ ಸಮಸ್ಯೆಗಳನ್ನು ಎದುರಿಸುತ್ತಿದ್ದೇವೆ ಮತ್ತು ಭವಿಷ್ಯದ ಪೀಳಿಗೆಗಳು ಅನುಸರಿಸಲು ಒಂದು ಮಾದರಿಯನ್ನು ಸ್ಥಾಪಿಸಲು ಅವುಗಳನ್ನು ಧರ್ಮದ ಅತ್ಯುತ್ತಮ ರೀತಿಯಲ್ಲಿ ಪರಿಹರಿಸಲು ಪ್ರಯತ್ನಿಸುತ್ತೇವೆ. ನಾವು ಮಾಡುವ ಪ್ರತಿಯೊಂದರಲ್ಲೂ ಧರ್ಮದ ಪರಿಶುದ್ಧತೆಯು ಹಾಳಾಗುವಂತೆ ನೋಡಿಕೊಳ್ಳಬೇಕು. ಜನರು ಧರ್ಮವನ್ನು ಜೀವನೋಪಾಯವಾಗಿ ಮಾಡಿಕೊಳ್ಳಬೇಕು. ಇದು ಅತ್ಯಂತ ಅಪಾಯಕಾರಿ. ತಮ್ಮ ಅಹಂನ್ನು ಅಥವಾ ಸ್ವಪ್ರತಿಷ್ಠೆಯನ್ನು ಹೆಚ್ಚಿಸಿಕೊಳ್ಳುವುದಕ್ಕಾಗಿ ಜನರು ಸೇವೆಯನ್ನು ಕೈಗೊಳ್ಳಬಾರದು. ಆಮೇಲೆ ಅಹಂಕಾರಿಯಾಗಿ ಇತರರೊಂದಿಗೆ ಒರಟಾಗಿ ಮಾತಾಡುವುದು. ಈ ಎಲ್ಲಾ ನಿಯಮಗಳು ಭವಿಷ್ಯದ ಪ್ರಧಾನ ಆಚಾರ್ಯರುಗಳ ಉಪಯೋಗಕ್ಕಾಗಿ. ಏಕೆಂದರೆ ಧರ್ಮ ಹರಡುತ್ತದೆ. ಈಗ ಇದು ಹರಡುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಒಂದು ಅಥವಾ ಎರಡು ಪೀಳಿಗೆಗಳಲ್ಲಿಯೇ ಪ್ರಪಂಚದಾದ್ಯಂತ ಅದು ಹರಡುತ್ತದೆ.

ಈಗ ಈ ಸಂಪ್ರದಾಯಕ್ಕೆ ಸರಿಯಾದ ಮಾರ್ಗಸೂಚಿಗಳನ್ನು ಮಾಡದಿದ್ದರೆ, ಸರಿಯಾದ ನಿಯಮಗಳನ್ನು ರೂಪಿಸದಿದ್ದರೆ ಮುಂದೆ ಬಹಳ ತೊಂದರೆಯಾಗುತ್ತದೆ. ಇದು ಗೃಹಸ್ಥ ಆಚಾರ್ಯರುಗಳ 'ವಿನಯ' (ನಿಯಮಗಳು). ಸಂದರ್ಭ ಬದಲಾದಂತೆ ಹೆಚ್ಚಿನ ನಿಯಮಗಳು ಬರಬಹುದು. ಬುದ್ಧರ ಸಮಯದಲ್ಲೂ ಅವರು ಕೆಲವು ('ವಿನಯ') ನಿಯಮಗಳನ್ನು ಮಾಡಿದರು, ನಂತರ ಏನೋ ಸಂಭವಿಸಿದಾಗ ಮತ್ತೊಂದು ನಿಯಮ ಬರುತ್ತಿತ್ತು, ಮತ್ತೇನೋ ನಡೆಯಿತು, ಮತ್ತೊಂದು ನಿಯಮ. ಇದೇ ರೀತಿಯಲ್ಲಿ, ಅನುಭವವಾದಂತೆ ನಾವು ನಿಯಮಗಳನ್ನು ಸೇರಿಸುವುದು, ಬದಲಾಯಿಸುವುದು ಮುಂದುವರಿಯುತ್ತದೆ. ಆದರೆ ಇದರ ಇಡೀ ಉದ್ದೇಶವು ಧರ್ಮ ಕಾರ್ಯವನ್ನು

ಸಂಪೂರ್ಣವಾಗಿ ಶುದ್ಧವಾಗಿಡುವುದು.ಯಾವುದೂ ತಪ್ಪಾಗಬಾರದು. ಈ ರೀತಿಯಾಗಿ ಮಾತ್ರ ನಾನು ಜನರನ್ನು ನೇಮಕ ಮಾಡುತ್ತೇನೆ.

**ಪ್ರಶ್ನೆ : ನಿಮ್ಮ ಪ್ರವಚನಗಳಲ್ಲಿ ನೀವು 31 ಲೋಕಗಳ ಬಗ್ಗೆ ಹೇಳುತ್ತೀರಿ. ಅನೇಕ ಬಾರಿ ಅದು ಊಹೆಯಂತೆ ತೋರುತ್ತದೆ. ಇದನ್ನು ನಾವು ಸಂವೇದನೆಗಳ ಮಟ್ಟದಲ್ಲಿ ಅರ್ಥ ಮಾಡಿಕೊಳ್ಳಲು ಸಾಧ್ಯವೇ?**

**ಗೋಯಂಕಜಿ :** ಖಂಡಿತವಾಗಿ. ಇಡೀ ಧ್ಯಾನ ಸಾಧನೆಯು ನಿಮ್ಮನ್ನು ಆ ಹಂತಕ್ಕೆ ತೆಗೆದುಕೊಂಡು ಹೋಗುತ್ತದೆ. ಕೆಲವೇ ಕೆಲವು ಧ್ಯಾನ ಸಾಧಕರು ಇದನ್ನು ಅನುಭವಿಸುತ್ತಾರೆ– "ಈಗ ನಾನು ಯಾವ ರೀತಿಯ ತರಂಗಗಳನ್ನು ಅನುಭವಿಸುತ್ತಿದ್ದೇನೆ?" ಈ ಲೋಕದ ತರಂಗಗಳು ಈ ರೀತಿ ಇರುತ್ತವೆ, ಇನ್ನೊಂದು ಲೋಕದ ತರಂಗಗಳು ಇನ್ನೊಂದು ತೆರನಾಗಿರುತ್ತವೆ. ನಂತರದಲ್ಲಿ ಅವರು ಇನ್ನೂ ಹೆಚ್ಚಿನ ವಿವರಗಳಿಗೆ ಹೋಗುತ್ತಾರೆ.

ಆದರೆ ಈ 31 ಲೋಕಗಳ ವಾಸ್ತವಿಕತೆಯನ್ನು ಮೊದಲೇ ಒಪ್ಪಿಕೊಳ್ಳುವ ಅವಶ್ಯಕತೆಯಿಲ್ಲ. ಒಪ್ಪಿಕೊಂಡರೆ ಮಾತ್ರ ವ್ಯಕ್ತಿಯು ಧರ್ಮದಲ್ಲಿ ಪ್ರಗತಿ ಹೊಂದುತ್ತಾನೆ ಎಂದೇನೂ ಇಲ್ಲ. ಹಾಗೇನೂ ಇಲ್ಲ. ವಿವಿಧ ಸಂಪ್ರದಾಯಗಳ ಜನರು ನನ್ನಲ್ಲಿಗೆ ಬರುತ್ತಾರೆ. ಹಿಂದಿನ ಅಥವಾ ಮುಂದಿನ ಜನ್ಮದ ಬಗ್ಗೆ ನಂಬಿಕೆಯಿಲ್ಲದಿರುವ ಸಂಪ್ರದಾಯಗಳಿವೆ. ಸರಿ. ಆಗ ನಾನು "ಈ ಜನ್ಮದಲ್ಲಿ ನಂಬಿಕೆ ಇದೆಯೇ"? ಎಂದು ಕೇಳುತ್ತೇನೆ. ಹೌದು. ಹಾಗಾದರೆ ಈ ಜೀವನವನ್ನು ಸುಧಾರಿಸಲು ಕೆಲಸಮಾಡಿ. ಆಮೇಲೆ ನಿಮ್ಮ ಅನುಭವದಿಂದ ಹಿಂದಿನ ಅಥವಾ ಮುಂದಿನ ಜನ್ಮದ ಬಗ್ಗೆ ಅರ್ಥ ಮಾಡಿಕೊಳ್ಳುವ ಹಂತ ತಲುಪಿದಾಗ ಅದನ್ನು ಒಪ್ಪಿಕೊಳ್ಳಿ, ಈಗ ಬೇಡ.

**ಪ್ರಶ್ನೆ:** ಯಾರಿಗಾದರೂ ಅವರ ಸ್ವಭಾವಕ್ಕೆ ವಿರುದ್ಧವಾದ ಕೆಲಸ ಕೊಟ್ಟು ಸೇವೆ ಮಾಡುವ ಅವಕಾಶಕೊಟ್ಟರೆ, ಆ ಕೆಲಸವನ್ನು ಒಪ್ಪಿಕೊಳ್ಳುವುದು ಸರಿಯೇ? ಉದಾಹರಣೆಗೆ, ಜನರ ಮಧ್ಯೆ ಕೆಲಸಮಾಡಲು ಬಯಸುವ ವ್ಯಕ್ತಿಗೆ ಕಂಪ್ಯೂಟರ್ ಕೆಲಸ ಮಾಡಲು ಹೇಳುವುದು.

**ಗೋಯಂಕಜಿ :** ಈ ಸಮಸ್ಯೆಯು ಮ್ಯಾನೇಜ್‌ಮೆಂಟ್‌ನವರದು. ಯಾವುದೇ ಕೆಲಸವನ್ನು ಯಾರ ಮೇಲೂ ಹೇರಬಾರದು. ಜನರು ಸೇವೆ ಮಾಡಲು ಇಲ್ಲಿಗೆ ಬರುತ್ತಾರೆ. ಯಾವುದೋ ಒಂದು ಕೆಲಸವನ್ನು ಮಾಡಲು ಈ ವ್ಯಕ್ತಿಯು ಸಮರ್ಥನಲ್ಲ. ಆದರೆ "ಈ ಕೆಲಸವನ್ನು ಮಾತ್ರ ನೀವು ಮಾಡಬೇಕು" ಎಂದು ನೀವು ಹೇಳುತ್ತೀರಿ. ಆಗ ಈ ವ್ಯಕ್ತಿಯ ಪ್ರಗತಿಗೆ ನೀವು ಅಡ್ಡಿಯುಂಟು ಮಾಡುತ್ತೀರಿ. ಇಡೀ ಕೇಂದ್ರದ ಬೆಳವಣಿಗೆಗೆ ನೀವು ಅಡ್ಡಿ ಉಂಟು ಮಾಡುತ್ತೀರಿ. ಇದನ್ನು ಯಾವಾಗಲೂ ಮಾಡಬಾರದು. ಆದರೆ ಮ್ಯಾನೇಜ್‌ಮೆಂಟ್‌ನವರು ಈ ಕೆಲಸವನ್ನು ಸರಿಯಾಗಿ ನಿರ್ವಹಿಸಬೇಕು.

ನಿಶ್ಚಿತವಾಗಿ ಧಮ್ಮ ಸೇವಕರ ಮೇಲೆ ಏನನ್ನೂ ಹೇರಬಾರದು. ಜೊತೆಗೆ ನಿರ್ವಾಹಕರು ಬಹಳ ಜಾಗರೂಕರಾಗಿರಬೇಕು. ಉದಾಹರಣೆಗೆ ಯಾರೋ ಬಂದು, "ನಾನು ಇಲ್ಲಿ ಆರು ತಿಂಗಳು ಅಥವಾ ಒಂದು ವರ್ಷ ಇರುತ್ತೇನೆ. ಆದರೆ ನೋಡಿ, ನಾನು ಇಂತಿಂತಹುದನ್ನು ಮಾಡಲು ಆಗುವುದಿಲ್ಲ. ನಾನು ಯಾವುದೇ ಸೇವೆ ಮಾಡುವುದಿಲ್ಲ. ದಿನಕ್ಕೆ ಎರಡು ಬಾರಿ ಮಾತ್ರ ಧ್ಯಾನ ಮಾಡುತ್ತೇನೆ. ಉಳಿದ ಸಮಯದಲ್ಲಿ ವಿಶ್ರಾಂತಿ ಪಡೆಯುತ್ತೇನೆ ಅಥವಾ ಸುಮ್ಮನೆ ಕಾಲ ಕಳೆಯುತ್ತೇನೆ. ಆರು ತಿಂಗಳ ನಂತರ ಹೊರಟುಹೋಗುತ್ತೇನೆ" ಎಂದು ಹೇಳಬಹುದು. ಬೇಡ. ಈ ವ್ಯಕ್ತಿಯು ತನಗೆ ತಾನೇ ಹಾನಿ ಮಾಡಿಕೊಳ್ಳಲು ಪ್ರಾರಂಭಿಸಿದ್ದಾನೆ. ಜೊತೆಗೆ ಧ್ಯಾನ ಕೇಂದ್ರಕ್ಕೂ ಹಾನಿ ಮಾಡಲು ಪ್ರಾರಂಭಿಸುತ್ತಾನೆ. ಆದ್ದರಿಂದ ಇಂತಹದರ ಬಗ್ಗೆ ನಾವು ಎಚ್ಚರದಿಂದಿರಬೇಕು. ಆದರೆ ಇದರ ಅರ್ಥ ಒಬ್ಬ ವ್ಯಕ್ತಿಗೆ ಅವನಿಂದ ಸಾಧ್ಯವಾಗದ ಕೆಲಸವನ್ನು ಹೇರುವುದಲ್ಲ.

**ಪ್ರಶ್ನೆ:** ಗುರೂಜಿ, ಮುಂಬಯಿಯಲ್ಲಿ ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ ಪುತ್ಥಳಿಯನ್ನು ಅನಾವರಣಗೊಳಿಸಲು ಮುಖ್ಯ ಅತಿಥಿಯಾಗಿ ಹೋಗಲು ನೀವು ಒಪ್ಪಿದ್ದೀರಿ ಎಂದು ತಿಳಿಯಿತು. ಇದು ಒಂದು ಪಂಥೀಯ ಸಂಘಟನೆಗೆ ನೀವು ಬೆಂಬಲ ನೀಡಿದಂತಾಗಬಹುದು ಎಂಬ ಆತಂಕ ನಮ್ಮಲ್ಲಿದೆ. ದಯವಿಟ್ಟು ಸ್ಪಷ್ಟಪಡಿಸಿ.

**ಗೋಯಂಕಜಿ :** ಸರಿ, ಯಾರಾದರೂ ನನ್ನನ್ನು ಮುಖ್ಯ ಅತಿಥಿಯಾಗಿ ಬರಲು ಕರೆದರೆ, "ನನ್ನನ್ನು ಮುಖ್ಯ ಅತಿಥಿಯಾಗಿ ಮಾಡಬೇಡಿ, ಮೂರನೇ ದರ್ಜೆಯ ಅತಿಥಿ ಮಾಡಿ" ಎಂದು ನಾನು ಹೇಗೆ ಹೇಳಲು ಸಾಧ್ಯ? ಸರಿ, ಮುಖ್ಯ ಅತಿಥಿಯಾಗಿ ಅಲ್ಲಿರುತ್ತೇನೆ. ಆದರೆ ನಾನು ಅಲ್ಲಿ ಏನು ಹೇಳುತ್ತೇನೆಯೋ ಅದು ಯಾವುದೂ ಪರಿಶುದ್ಧ ಧರ್ಮಕ್ಕೆ ವಿರುದ್ಧವಾಗಿರುವುದಿಲ್ಲ. ಅಂಬೇಡ್ಕರ್ ಅವರ ಬಗೆಗೆ ನನಗೆ ಅಪಾರವಾದ ಗೌರವವಿದೆ. ಏಕೆಂದರೆ ಅವರು ಅಗಾಧವಾದುದನ್ನು ಸಾಧಿಸಿದ್ದಾರೆ. ತಲತಲಾಂತರಗಳಿಂದ ನನ್ನ ಪೂರ್ವಜರು ಮತ್ತು ಮೇಲ್ವರ್ಗದ ಎಲ್ಲಾ ಜನರು ಈ ಜನರನ್ನು ದಮನ ಮಾಡಿದ್ದಾರೆ. ಅವರಿಗೆ ಎಂತಹ ಘೋರ ಅನ್ಯಾಯ ಮಾಡಿದ್ದಾರೆ. ಅವರ ಬಗ್ಗೆ ನನಗೆ ಎಲ್ಲಾ ಅನುಕಂಪವಿದೆ ; ಅವರು ಧರ್ಮದಲ್ಲಿ ಬೆಳೆಯಬೇಕು ಎಂದು ನಾನು ಬಯಸುತ್ತೇನೆ.

ಆದರೆ, ಪರಿಶುದ್ಧ ಧರ್ಮ ಎಂದರೇನು? ಎಂಬುದನ್ನು ಅವರು ಅರ್ಥಮಾಡಿಕೊಂಡಿಲ್ಲ. ಆದ್ದರಿಂದ ಪರಿಶುದ್ಧ ಧರ್ಮವನ್ನು ಅವರಿಗೆ ವಿವರಿಸುವುದು ನನ್ನ ಕರ್ತವ್ಯ. ಹಾಗಾಗಿ ನಾನು ಒಂದು ಷರತ್ತನ್ನು ಹಾಕಿದೆ. "ನೀವು ನನ್ನನ್ನು ಆಹ್ವಾನಿಸಿದರೆ ನಾನು ವಿಪಶ್ಯನದ ಬಗ್ಗೆ ಮಾತಾಡುತ್ತೇನೆ, ವಿಪಶ್ಯನ ಬಿಟ್ಟು ಬೇರೆ ಯಾವುದೂ ಅಲ್ಲ". "ಅದ್ಭುತ. ನೀವು ವಿಪಶ್ಯನದ ಬಗ್ಗೆ ಮಾತ್ರ ಮಾತಾಡಿ. ಈ ಉದ್ದೇಶಕ್ಕಾಗಿಯೇ ನಾವು ನಿಮ್ಮನ್ನು ಆಹ್ವಾನಿಸುತ್ತಿದ್ದೇವೆ. ವಿಪಶ್ಯನ ಎಂದರೇನು, ಬುದ್ಧರ ನಿಜವಾದ ಬೋಧನೆ ಏನು ಎಂಬುದು ಜನರಿಗೆ ತಿಳಿಯುತ್ತದೆ" ಎಂದು ಹೇಳಿದರು. ಆ ಜನರನ್ನು ತಲತಲಾಂತರಗಳಿಂದ ದಮನ ಮಾಡಲಾಗಿದೆ. ಅವರನ್ನು ಜಾತಿ ವ್ಯವಸ್ಥೆಯಿಂದ ಹೊರತಂದು ಅವರಿಗೊಂದು ಸ್ವ–ಗೌರವವನ್ನು ಬಾಬಾ ಸಾಹೇಬರು ತಂದುಕೊಟ್ಟು ಬಹಳ ಒಳ್ಳೆಯ ಕೆಲಸ ಮಾಡಿದರು. ಆದರೆ ಬುದ್ಧರ ನಿಜವಾದ ಬೋಧನೆಯಿಲ್ಲ. ಅದೂ ಅವರಿಗೆ ಸಿಕ್ಕರೆ ಅದ್ಭುತವಾಗಿರುತ್ತದೆ. ಆದ್ದರಿಂದ ಅವರಿಗೆ ಪರಿಶುದ್ಧ ಧರ್ಮವನ್ನು ಕೊಡುವ ನನ್ನ ಪಾತ್ರವನ್ನು ನಾನು ನಿರ್ವಹಿಸುತ್ತೇನೆ.

**ಪ್ರಶ್ನೆ:** ಸಹಾಯಕ ಆಚಾರ್ಯರು ಧರ್ಮ ಪೀಠದ ಮೇಲೆ ಕುಳಿತಾಗ ಆಭರಣ ಧರಿಸುವುದು ಅಥವಾ ಆಕರ್ಷಕ ಬಟ್ಟೆಗಳನ್ನು ತೊಡುವುದು ಎಂಟು ಶೀಲಗಳಲ್ಲಿ ಒಂದನ್ನು ಮುರಿದಂತಾಗುವುದಿಲ್ಲವೇ?

**ಗೋಯಂಕಜಿ :** ವಾಸ್ತವವಾಗಿ ಸಹಾಯಕ ಆಚಾರ್ಯರು ಅಷ್ಟ ಶೀಲಗಳನ್ನು ಅನುಸರಿಸುವುದಿಲ್ಲ. ಅವರು ಐದು ಶೀಲಗಳನ್ನು ಪಾಲಿಸುತ್ತಾರೆ. ಸಹಾಯಕ ಆಚಾರ್ಯರು ಶಿಬಿರಾರ್ಥಿಯಾಗಿ ಶಿಬಿರ ಸೇರಿದಾಗ, ಅವರು ಎಂಟು ಶೀಲಗಳನ್ನು ಪಾಲಿಸುತ್ತಾರೆ. ಅವರು ಯಾವಾಗಲೂ ಎಂಟು ಶೀಲಗಳನ್ನು ಅನುಸರಿಸುವುದು ಸಾಧ್ಯವಿಲ್ಲ. ಏಕೆಂದರೆ ಅವರು ಬೇರೆ ಬೇರೆ ಕಡೆ ಶಿಬಿರಗಳನ್ನು ನಡೆಸಿಕೊಡುತ್ತಾರೆ. ಅಂದರೆ ಅವರ ಜೀವಮಾನ ಪೂರ್ತಿ ಅಷ್ಟ ಶೀಲಗಳಲ್ಲಿ ಇರಬೇಕಾಗಿಲ್ಲ. ಶಿಬಿರದಲ್ಲಿ ಹಳೆಯ ವಿದ್ಯಾರ್ಥಿಗಳು ಅಷ್ಟ ಶೀಲಗಳನ್ನು ಅನುಸರಿಸಬೇಕು. ಆದರೆ ಆಚಾರ್ಯರು ಪಂಚಶೀಲಗಳಲ್ಲಿ ಬಹಳ ಪರಿಪೂರ್ಣರಾಗಿರಬೇಕು.

**ಪ್ರಶ್ನೆ:** ಮಕ್ಕಳನ್ನು ಪಡೆಯುವುದು ಧರ್ಮದಲ್ಲಿನ ಪ್ರಗತಿಗೆ ಅಡ್ಡಿಯಾಗುತ್ತದೆಯೇ?

**ಗೋಯಂಕಜಿ :** ಏಕೆ ಅಡ್ಡಿಯಾಗುತ್ತದೆ? ಧರ್ಮದ ರೀತಿಯಲ್ಲಿ ನಿಮ್ಮ ಮಕ್ಕಳನ್ನು ನೋಡಿಕೊಳ್ಳಿ. ನಿಮ್ಮ ಮಕ್ಕಳಿಗೆ ಮೈತ್ರಿ ಕೊಡುವ ಅದ್ಭುತವಾದ ಅವಕಾಶವನ್ನು ನೀವು ಪಡೆಯುತ್ತೀರಿ. ಅದು ನೀವು ಇಡೀ ವಿಶ್ವಕ್ಕೇ ಮೈತ್ರಿ ಕೊಡಲು ಸಹಾಯಕವಾಗುತ್ತದೆ. ಮಕ್ಕಳನ್ನು ಪಡೆಯುವುದು ಅಡ್ಡಿಯಲ್ಲ. ತಾಯಿ ವಿಶಾಖ ಅವರಿಗೆ 20 ಮಕ್ಕಳಿದ್ದವು ಮತ್ತು ಧರ್ಮದಲ್ಲಿ ಅವರು ಬಹಳ ಪ್ರಗತಿ ಹೊಂದಿದ್ದರು. ನೀವು ಕುಟುಂಬ ಯೋಜನೆ ಮಾಡಿಕೊಳ್ಳಬಾರದು ಎಂಬುದು ಇದರ ಅರ್ಥವಲ್ಲ. ಆದರೆ ಮಕ್ಕಳನ್ನು ಪಡೆದೂ ನೀವು ಧರ್ಮದಲ್ಲಿ ಪ್ರಗತಿ ಹೊಂದಬಹುದು.

**ಪ್ರಶ್ನೆ:** ಧ್ಯಾನ ಸಾಧಕರಲ್ಲದವರೂ ವಿವಾಹ ವಿಚ್ಛೇದನ ಪಡೆಯುವುದು ನನಗೆ ಇಷ್ಟವಾಗುವುದಿಲ್ಲ. ಆದರೆ ಪಶ್ಚಿಮ ದೇಶಗಳಲ್ಲಿನ ಧರ್ಮದಲ್ಲಿ ಸ್ಥಾಪಿತಗೊಂಡ ದಂಪತಿಗಳು ಪ್ರತ್ಯೇಕವಾಗುವುದು ವಿಶೇಷವಾಗಿ ನನಗೆ ತೊಂದರೆ ಉಂಟು ಮಾಡುತ್ತದೆ.

**ಗೋಯಂಕಜಿ :** ಪಶ್ಚಿಮದಲ್ಲಾಗಲಿ ಅಥವಾ ಪೂರ್ವದಲ್ಲಾಗಲಿ ಅದು ಪ್ರತಿಯೊಬ್ಬರಿಗೂ ಕ್ಷೋಭೆಯುಂಟು ಮಾಡುತ್ತದೆ. ನೋಡಿ, ನೀವು ಯಾರೊಟ್ಟಿಗೋ ವಿವಾಹ ಮಾಡಿಕೊಂಡು ಬಾಗಿಲನ್ನು ತೆರೆದಿಡುತ್ತೀರಿ. ಯಾವಾಗ ಬೇಕಾದರೂ ಗಂಡ ಹೆಂಡತಿಯನ್ನು, ಹೆಂಡತಿ ಗಂಡನನ್ನು ಬಿಟ್ಟು ಹೋಗಬಹುದು. ಇದು ಮಾದರಿ ಕೌಟುಂಬಿಕ ಜೀವನ ಅಲ್ಲ. ಮಕ್ಕಳ ಗತಿ ಏನು?" ಈಗ ಯಾರನ್ನು ನಾನು ಅಮ್ಮ ಎಂದು ಕರೆಯಲಿ? ಯಾರನ್ನು ನನ್ನ ತಂದೆ ಎಂದು ಕರೆಯಲಿ?" ನಾನು ಶಿಬಿರಗಳನ್ನು ತೆಗೆದುಕೊಳ್ಳುತ್ತಿದ್ದಾಗ, ಯಾರೋ ಒಬ್ಬರು ನನಗೆ "ಮೂರು ಜನ ತಂದೆ ತಾಯಿಗಳು" ಎಂದು ಬರೆದಿದ್ದರು. ಅದನ್ನು ಓದಿ ಆ ವ್ಯಕ್ತಿಯ ಬಗ್ಗೆ ನನಗೆ ಬಹಳ ಅನುಕಂಪವಾಯಿತು. ಅಂದರೆ ಈ ವ್ಯಕ್ತಿಯು ತನ್ನ ತಂದೆ ಅಥವಾ ತಾಯಿಯ ಪ್ರೀತಿಯನ್ನು ಪಡೆಯಲಿಲ್ಲ. ಅವರು ಬೇರೊಬ್ಬರ ಜೊತೆ ಓಡಿಹೋಗಿದ್ದಾರೆ.

ಇದು ಖಂಡಿತವಾಗಿಯೂ ಧರ್ಮಕ್ಕೆ ವಿರುದ್ಧವಾದುದು. ನಾವು ಇದನ್ನು ಪ್ರೋತ್ಸಾಹಿಸುವುದಿಲ್ಲ. ಆದರೆ ಇದು ನಡೆಯುತ್ತದೆ. ನಿಧಾನವಾಗಿ

RNI. No. : KARKAN/2015/68727. Postal Regn. No.: RNP/KA/BGS/2253/2023-25
Published On 10th & Posted On 20th March. 2023. Posted At : Bengaluru PSO, B'luru 26. Price(Annual)Rs.30.

ನಾವು ಇದನ್ನು ಬದಲಾಯಿಸಬೇಕು. ನನ್ನ ಪ್ರಕಾರ ಇದು ಪಶ್ಚಿಮದ ಸಂಸ್ಕೃತಿಯ ಒಂದು ದೊಡ್ಡ ಶಾಪ. ಆದರೆ ಇದೇ ಸಮಯದಲ್ಲಿ ಎಂತಹ ಪರಿಸ್ಥಿತಿ ಬಂದರೂ ಪ್ರತ್ಯೇಕವಾಗಬಾರದು ಎಂಬಷ್ಟು ಕಟ್ಟುನಿಟ್ಟಾಗಿಯೂ ಇರಬಾರದು. ನೀವು ಪ್ರತ್ಯೇಕವಾರೆ, "ನಾನು ಮರು ಮದುವೆಯಾಗುವುದಿಲ್ಲ; ನಾನು ವೈವಾಹಿಕ ಜೀವನವನ್ನು ನೋಡಿದ್ದೇನೆ. ಅದು ಕೊನೆಯಾಗಿದೆ. ಈಗ ನಾನು ಬ್ರಹ್ಮಚರ್ಯದ ಜೀವನ ನಡೆಸುತ್ತೇನೆ" ಎಂದು ಪ್ರಮಾಣ ವಚನ ತೆಗೆದುಕೊಳ್ಳಿ. ಆಗ ವಿಚ್ಛೇದನಕ್ಕೆ ಅನುಮತಿಯಿದೆ.

**ಪ್ರಶ್ನೆ:** ಚಿಕ್ಕ ಮಕ್ಕಳ ತಾಯಂದಿರಿಗೆ ಧ್ಯಾನ ಸಾಧನೆ ಮಾಡಲು ಕಷ್ಟವಾಗುತ್ತಿದೆ. ಈ ಕಾರಣಕ್ಕಾಗಿ ಅವರು ಯಾತನೆಪಡುತ್ತಿದ್ದಾರೆ. ಅವರಿಗೆ ಏನಾದರೂ ಸಲಹೆ ಕೊಡಲು ಸಾಧ್ಯವೇ?

**ಗೋಯಂಕಜಿ :** ಧ್ಯಾನ ಮಾಡಲು ಅವರಿಗೆ ಏಕೆ ಸಾಧ್ಯವಾಗುತ್ತಿಲ್ಲ? ತೊಡೆಯ ಮೇಲೆ ಮಗು ಇದೆ. ಆದರೂ ನೀವು ಅಭ್ಯಾಸ ಮಾಡಬಹುದು. ಮಗುವಿಗೆ ನೀವು ಮೈತ್ರಿ ಕೊಡಬಹುದು, ಇತರರಿಗೂ ನೀವು ಮೈತ್ರಿ ಕೊಡಬಹುದು. ಪ್ರತಿಯೊಂದು ಸಂದರ್ಭದಲ್ಲೂ ಧ್ಯಾನ ಮಾಡುವುದನ್ನು ನೀವು ಕಲಿಯಬೇಕು. ನಿಮ್ಮ ಎಲ್ಲಾ ಕೆಲಸಗಳಿಗೂ ಧರ್ಮವನ್ನು ಉಪಯೋಗಿಸಿ. ಮಗುವನ್ನು ನೋಡಿಕೊಳ್ಳುವುದು ತಾಯಿಯ ಕರ್ತವ್ಯ. ಇದನ್ನು ಧರ್ಮದ ರೀತಿಯಲ್ಲಿ ಮಾಡಿ. ಅದು ಸಹಾಯ ಮಾಡುತ್ತದೆ.

**ಪ್ರಶ್ನೆ:** ಆಚಾರ್ಯರುಗಳು ಮತ್ತು ಸಹಾಯಕ ಆಚಾರ್ಯರುಗಳು ಏಕೆ ಪ್ರತ್ಯೇಕವಾಗಿ ಊಟ ಮಾಡುತ್ತಾರೆ ಮತ್ತು ಶಿಬಿರದ ಸಮಯದಲ್ಲಿ ಅವರಿಗೆ ಅನುಕೂಲಕರವಾದ ವಸತಿ ನೀಡುತ್ತಾರೆ ಎಂದು ವಿದ್ಯಾರ್ಥಿಗಳು ಪ್ರಶ್ನಿಸುವುದನ್ನು ನಾನು ಕೇಳಿದ್ದೇನೆ.

**ಗೋಯಂಕಜಿ :** ಅನುಕೂಲಕರವಾದ ವಸತಿಯನ್ನು ಅವರಿಗೆ ಏಕೆ ಕೊಡಲಾಗುತ್ತದೆ. ಪ್ರತಿಯೊಬ್ಬ ವಿದ್ಯಾರ್ಥಿಗೂ ಅವರಿಗೆ ಇಷ್ಟವಾಗುವಂತಹ ವಸತಿ ನೀಡಲು ಸಾಧ್ಯವಾಗುವುದಿಲ್ಲ ಎಂಬುದನ್ನು ಅರ್ಥಮಾಡಿಕೊಳ್ಳಿ. ವಿದ್ಯಾರ್ಥಿಯು ಹತ್ತು ದಿನಗಳಿಗೆ ಮಾತ್ರ ಬರುತ್ತಾರೆ. ಆದರೆ ಆಚಾರ್ಯರು ತಿಂಗಳುಗಟ್ಟಲೆ ಅಥವಾ ವರ್ಷಗಟ್ಟಲೆ ಅಲ್ಲಿರುತ್ತಾರೆ. ನಾವು ಅವಶ್ಯಕವಾದ ಸವಲತ್ತುಗಳನ್ನು ನೀಡದಿದ್ದರೆ, ಅವರು ಸರಿಯಾಗಿ ಬೋಧಿಸಲು ಹೇಗೆ ಸಾಧ್ಯವಾಗುತ್ತದೆ? ಆದ್ದರಿಂದ ಅದು ಐಷಾರಾಮಿ ಅಲ್ಲ, ಅವಶ್ಯಕತೆ, ವಿದ್ಯಾರ್ಥಿಗಳಿಗೆ ಕೊಡುವುದಕ್ಕಿಂತ ಹೆಚ್ಚಿನ ಸವಲತ್ತುಗಳನ್ನು ನಾವು ಅವರಿಗೆ ಕೊಡಬೇಕಾಗುತ್ತದೆ.

**ಪ್ರಶ್ನೆ:** ಸ್ವರತಿಯು(ಹಸ್ತ ಮೈಥುನ) ಶೀಲವನ್ನು ಮುರಿದಂತೆ ಎಂದು ನೀವು ಏಕೆ ಹೇಳುತ್ತೀರಿ ಎಂಬುದನ್ನು ಕೃಪೆ ಮಾಡಿ ಮತ್ತೊಮ್ಮೆ ವಿವರಿಸಿ.

**ಗೋಯಂಕಜಿ :** ಸರಿ, ಸ್ವರತಿಯು ಶೀಲವನ್ನು ಮುರಿದಂತೆ ಎಂದು ನಾನು ಹೇಳುವುದಿಲ್ಲ.ಆದರೆ ಅದು ಶೀಲವನ್ನು ಮುರಿಯುವುದಕ್ಕೆ ಮುನ್ನಡೆಸುತ್ತದೆ. ಅದರ ಅರ್ಥ ನೀವು ನಿಮ್ಮ ಲೈಂಗಿಕಾಸಕ್ತಿಯ ದಾಸರಾಗಿದ್ದೀರಿ. ನಿಮಗೆ ಬೇರೆ ಯಾವುದೂ ಸಿಗದಿದ್ದಾಗ ಸ್ವರತಿಯಲ್ಲಿ ತೊಡಗುತ್ತೀರಿ. ಅದು ನಿಮ್ಮನ್ನು ತಪ್ಪು ದಾರಿಯಲ್ಲಿ ಮುನ್ನಡೆಸುತ್ತದೆ. ಆದ್ದರಿಂದ, ಜನರನ್ನು ಇದರಿಂದ ಮತ್ತು ಕಾಮೋದ್ರೇಕದಿಂದ ಹೊರತರಲು ನಾವು ಪ್ರಯತ್ನಿಸುತ್ತೇವೆ. ಇದೂ ವಿಪಶ್ಯನದ ಉದ್ದೇಶ.

**ಧಮ್ಮ ಪಫುಲ್ಲಾ, ಬೆಂಗಳೂರು**

**10 ದಿನದ ಶಿಬಿರಗಳು** :2023 :ಫೆಬ್ರವರಿ 24–7 ಮಾರ್ಚ್ 10–21, 29–9 ಏಪ್ರಿಲ್ 12–23, 26–7 ಮೇ 24–4 ಜೂನ್ 7–18, 21–2 ಜುಲೈ 5–16, 26–6, ಆಗಸ್ಟ್ 9–20, 23–3 ಸೆಪ್ಟಂಬರ್, 6–1, 6–17, 21–29 ಅಕ್ಟೋಬರ್, 2–13, 25–5 ನವೆಂಬರ್, 8–19.

**ವಿಳಾಸ :** ಧಮ್ಮ ಪಫುಲ್ಲ, ಆಲೂರು, ದಾಸನಪುರ ಹೋಬಳಿ, ಬೆಂಗಳೂರು. ರಾಷ್ಟ್ರೀಯ ಹೆದ್ದಾರಿ–4ರಲ್ಲಿ, ಹಿಮಾಲಯ ಡ್ರಗ್ ಕಂಪನಿಯ ಎದುರಿನ ಮಾಕಳಿ ಕ್ರಾಸ್‌ಗೆ ಬಂದರೆ ಆಟೋರಿಕ್ಷಾ ಸಿಗುತ್ತವೆ. ಬೆಂಗಳೂರು ಸಿಟಿ ಬಸ್ ನಿಲ್ದಾಣದಿಂದ (ಮೆಜೆಸ್ಟಿಕ್)ನಗರ ಸಾರಿಗೆ ಬಸ್ ಸಂಖ್ಯೆ :256,258,258ಸಿ. ಸಂಪರ್ಕ ಸಂಖ್ಯೆಗಳು: 99725 88377, 63615 70725, 99725 88377, 99009 55930. **ಇ–ಮೇಲ್** : info@ paphulla. dhamma. org;website; www.vridhamma. org.

**ಧಮ್ಮ ನಗರಿ ವಿಪಶ್ಯನ ಧ್ಯಾನ ಕೇಂದ್ರ ದಾವಣಗೆರೆ.**

**10 ದಿನದ ಶಿಬಿರಗಳು** :–2023, ಜನವರಿ 3–14 ಫೆಬ್ರವರಿ 15–26 ಮಾರ್ಚ್ 24–4 ಏಪ್ರಿಲ್ 11–22, ಮೇ 17–28, ಜೂನ್ 21–2, ಜುಲೈ 12–23 ನೋಂದಣಿ ಮಾಡಿಕೊಳ್ಳಲು ಈ ಕೆಳಗಿನ ಲಿಂಕ್ ಅನ್ನು ಉಪಯೋಗಿಸಿಕೊಳ್ಳಿ:

ಮೂರು ದಿನದ ಧ್ಯಾನ ಶಿಬಿರ : ಜೂನ್ 8 ರಿಂದ 11.

https://www.dhamma.org/en/schedules/v2/noncenter/davanagere.in#normal.

**ನೋಂದಣಿ ಸಹಾಯ ಬೇಕಾದರೆ ಸಂಪರ್ಕಿಸಿ :** ಅಭಿಷೇಕ ರಾಮ್ +91 90087 33008

**ಧಮ್ಮ ನದಿ, ವಿಪಶ್ಯನ ಧ್ಯಾನಕೇಂದ್ರ ಉಡುಪಿ ಜಿಲ್ಲೆ**

ನಿರ್ಮಾಣ ಕಾರ್ಯ ಆರಂಭವಾಗಿದೆ. ಪ್ರತಿ ಭಾನುವಾರ ಬೆಳಿಗ್ಗೆ 9 ರಿಂದ 1 ರವರೆಗೆ ಧ್ಯಾನ ಕಾರ್ಯಕ್ರಮ ಇರುತ್ತದೆ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ : 9449773942, 9880173542, 8792173942.

**ಧಮ್ಮ ಸುಖಾಲಯ, ಬೆಂಗಳೂರು.**

ಪ್ರತಿ ಭಾನುವಾರ ಒಂದು ದಿನದ ಶಿಬಿರವಿರುತ್ತದೆ.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ : ಪ್ರಕಾಶ್‌ಚಂದ್ರ 89898 66927, ಚೆಲುವರಾಜು 9900452939, ಸಂತೋಷ್ ಧರ್ಮರಾಜ್ 8762086089 ನೋಂದಣಿಗೆ:https:/sukhalaya. dhamma.org/en/tapodana.

ದಾರಿ ತೋರಿಸಲು: https://maps.app.goo.gl/EVGKU

**ಧಮ್ಮವನ, ಅಂತರರಾಷ್ಟ್ರೀಯ ವಿಪಶ್ಯನ ಧ್ಯಾನಕೇಂದ್ರ,**
**ನಾಡಪ್ಪನಹಳ್ಳಿ – 571 617, ಮೈಸೂರು ಜಿಲ್ಲೆ.**

ನಿರಂತರಾಗಿ 2 ಮತ್ತು ಮೂರು ದಿನದ ಶಿಬಿರಗಳನ್ನು ಆಯೋಜಿಸ ಲಾಗುತ್ತಿದೆ. ಆನ್‌ಲೈನ್‌ನಲ್ಲಿ ನೋಂದಣಿ ಮಾಡಿಕೊಳ್ಳಲು: www.dhamma.org/schedules/schvana.

ಹೆಚ್ಚಿನ ಮಾಹಿತಿಗೆ : 88805 19658

**ವಂತಿಗೆ : ವಾರ್ಷಿಕ: ರೂ.30, ಆಜೀವ: ರೂ.500. ವಂತಿಗೆ ಸಂದಾಯ ಮಾಡಬೇಕಾದ ಬ್ಯಾಂಕ್ ಖಾತೆ :3194101004234; IFSC code:CNRB0003194; ಕೆನರಾ ಬ್ಯಾಂಕ್, ನಾಗರಬಾವಿ, ಬೆಂಗಳೂರು. ಖಾತೆದಾರರು:ಕರ್ನಾಟಕ ವಿಪಶ್ಯನ ಪ್ರಚಾರ ಸಮಿತಿ. ಹಣ ಸಂದಾಯದ ವಿವರ ಮತ್ತು ಪತ್ರಿಕೆ ಕಳುಹಿಸಬೇಕಾದ ಅಂಚೆ ವಿಳಾಸವನ್ನು ಶ್ರೀಮತಿ ಪುಷ್ಪ .ಎಸ್., ಮೊ.ಸಂ:7337734934 ಗೆ ಎಸ್.ಎಮ್.ಎಸ್.ಮಾಡಿರಿ.**

**ಮುದ್ರಕರು: ಬಿ.ಪ್ರದೀಪ ಕುಮಾರ, ಪ್ರಕಾಶಕರು: ಶ್ರೀಮತಿ ಆರ್. ಚಂದ್ರಮತಿ** ಕರ್ನಾಟಕ ವಿಪಶ್ಯನ ಪ್ರಚಾರ ಸಮಿತಿ ಟ್ರಸ್ಟ್ ಪರವಾಗಿ.
**ಮುದ್ರಣ:** ಐರಣಿ ಆಫ್‌ಸೆಟ್ ಪ್ರಿಂಟರ್ಸ್, 4ನೇ ತಿರುವು, ಕೆ.ಹೆಚ್.ಬಿ.ಕಾಲೋನಿ,ದಾವಣಗೆರೆ–2.**ಪ್ರಕಾಶನ:**ಕರ್ನಾಟಕ ವಿಪಶ್ಯನ ಪ್ರಚಾರ ಸಮಿತಿ ಟ್ರಸ್ಟ್, #93, 30ನೇ ಅಡ್ಡರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು–560070. **ಗೌರವ ಸಂಪಾದಕರು: ಜಿ.ಟಿ. ಗೋವಿಂದಪ್ಪ**

**Printed by** B.Pradeep Kumar, **Published by** Smt. R. Chandramathi on be half of Karnataka Vipassana Prachara Samithi Trust and **Printed at**: Airani Offset Printers, 4th Cross, K.H.B.Colony, Davangere-2 and **Published at** Karnataka Vipassana Prachara Samithi Trust, #93, 30th Cross, Banashankari 2nd Stage, Bengaluru - 70. **Editor: G.T. Govindappa,**

ಇಂದ:
**ಕರ್ನಾಟಕ ವಿಪಶ್ಯನ ಪ್ರಚಾರ ಸಮಿತಿ ಟ್ರಸ್ಟ್**
#93, 30ನೇ ಅಡ್ಡರಸ್ತೆ, ಬನಶಂಕರಿ 2ನೇ ಹಂತ,
ಬೆಂಗಳೂರು–560070.

ಗೆ,